ಶ್ರೀಃ

# ಕಲ್ಯಾಣವೃಷ್ಟಿಸ್ತವಃ

**ಶ್ರೀ ಶಂಕರಭಗವತ್ಪಾದ ವಿರಚಿತ**

## ಕಲ್ಯಾಣವೃಷ್ಟಿಸ್ತವ, ಶಿವಪಂಚಾಕ್ಷರನಕ್ಷತ್ರಮಾಲಾಸ್ತೋತ್ರ ಹಾಗೂ ಲಕ್ಷ್ಮೀನೃಸಿಂಹ ಕರುಣಾರಸಸ್ತೋತ್ರಗಳು

**(ಮೂಲ ಹಾಗೂ ತಾತ್ಪರ್ಯದೊಂದಿಗೆ)**

**ವೇದಾಂತಭಾರತೀ**

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ–571 602

ಮೈಸೂರು ಜಿಲ್ಲೆ. ದೂ : 08223–262471

**Kalyanavrustistavah**- Collection of Kalyanavrustistava, Shiva Panchakshara Nakshatramala and lakshminrusimha Karunarasastotra of Sri Shankaracharya.

COPIES : 5000 PAGES : 64

© : *Vedanta Bharati*

PRICE : Rs. 10.00

PUBLISHED BY :
Vedanta Bharati
Chandramouli Road, Krishnarajanagara - 571 602,
Mysore District. PH : 08223- 262471

PRINTED AT : Span Print, Banashankari, Bangalore-70

# ಪ್ರಕಾಶಕರ ಮಾತು

ಜಗದ್ಗುರು ಶ್ರೀ ಶಂಕರಭಗವತ್ಪಾದರು ಉಪನಿಷತ್ ಪ್ರತಿಪಾದ್ಯವಾದ ಅದ್ವೈತಸಿದ್ಧಾಂತದ ತಳಹದಿಯ ಮೇಲೆ ಸನಾತನ ಧರ್ಮದ ಪುನಃಪ್ರತಿಷ್ಠಾಪನೆಯನ್ನು ಮಾಡಿ, ಇದರ ಸಂರಕ್ಷಣೆಗಾಗಿ ಭರತಖಂಡದ ನಾಲ್ಕು ದಿಕ್ಕುಗಳಲ್ಲಿ ಆಮ್ನಾಯಪೀಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಪ್ರಥಮವೂ ಪ್ರಧಾನವೂ ಆದ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠವು ಕರ್ನಾಟಕರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಗಾತೀರದಲ್ಲಿ ವಿರಾಜಮಾನವಾದ ಶೃಂಗೇರಿಕ್ಷೇತ್ರದಲ್ಲಿದೆ. ಅವಿಚ್ಛಿನ್ನ ಗುರುಪರಂಪರೆಯನ್ನು ಹೊಂದಿದ ಈ ಶಾರದಾಪೀಠದಲ್ಲಿ ಪೀಠಾಧೀಶ್ವರರಾಗಿ ವಿರಾಜಮಾನರಾದ ಪ್ರತಿಯೊಬ್ಬ ಗುರುಗಳೂ ಬ್ರಹ್ಮನಿಷ್ಠರಾಗಿ ಸದಾಚಾರ–ಸದ್ಧರ್ಮಪಾಲಕರಾಗಿದ್ದು ಜಿಜ್ಞಾಸುಗಳಿಗೆ ಧರ್ಮ ಮತ್ತು ಅದ್ವೈತತತ್ತ್ವವನ್ನು ಉಪದೇಶಿಸಿ ಈ ಪೀಠಕ್ಕೆ ಉಜ್ವಲವಾದ ಕೀರ್ತಿಯನ್ನು ತಂದುಕೊಟ್ಟಿದ್ದಾರೆ.

ಸಾಂಪ್ರತ ಈ ಪೀಠದಲ್ಲಿ ಪೀಠಾಧೀಶ್ವರರಾಗಿ ವಿರಾಜಮಾನರಾಗಿರುವ **ಜಗದ್ಗುರು ಶ್ರೀಶ್ರೀ ಭಾರತೀತೀರ್ಥಮಹಾಸನ್ನಿಧಾನಂಗಳವರು** ಈ ಪರಂಪರೆಯಲ್ಲಿ 36ನೆಯರವರಾಗಿ ಸರ್ವಜನವಂದ್ಯರಾಗಿದ್ದಾರೆ. ಪರಮಪೂಜ್ಯ ಮಹಾಸನ್ನಿಧಾನಂಗಳವರು ಸಂನ್ಯಾಸಾ–

ಶ್ರಮವನ್ನು ಸ್ವೀಕರಿಸಿ ಐವತ್ತು ವರ್ಷಗಳು ಸಂದಿರುವ ಶುಭಸಂದರ್ಭದಲ್ಲಿ ಮಹಾಸನ್ನಿಧಾನಂಗಳವರ ಕರಕಮಲಸಂಜಾತರಾದ **ಜಗದ್ಗುರು ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು** ರಾಜ್ಯಾದ್ಯಂತ ಶ್ರೀ ಶಂಕರಭಗವತ್ಪಾದರ ಉಪದೇಶಗಳನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಸಮಸ್ತ ಶಿಷ್ಯವೃಂದಕ್ಕೆ ವ್ಯಾಪಕವಾಗಿ ತಲುಪಿಸುವ ದಿವ್ಯಸಂಕಲ್ಪ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಪರಮಪೂಜ್ಯ ಸನ್ನಿಧಾನಂಗಳವರ ಆದೇಶದಂತೆ **ಪರಮಪೂಜ್ಯ ಶ್ರೀಶ್ರೀ ಶಂಕರಭಾರತೀ ಸ್ವಾಮಿಗಳವರ** ಅನುಗ್ರಹ ಮತ್ತು ಮಾರ್ಗದರ್ಶನದಲ್ಲಿ ವೇದಾಂತಭಾರತೀ ಸಂಸ್ಥೆಯು ಸಮಸ್ತ ಆಸ್ತಿಕಭಕ್ತಸಮೂಹಕ್ಕೆ ಶಂಕರಭಗವತ್ಪಾದರ ಮೂರು ಸ್ತೋತ್ರಗಳನ್ನು ಹೇಳಿಕೊಡುವ ಮತ್ತು ಅವುಗಳ ಸಾಮಾನ್ಯ ಅರ್ಥಜ್ಞಾನದೊಂದಿಗೆ ಪಾರಾಯಣ ಮಾಡುವ ಕಾರ್ಯಕ್ರಮವನ್ನು ನಡೆಸಲು ನಿಶ್ಚಯಿಸಿದೆ. ವೇದಾಂತಭಾರತಿಯ ಮಹಾಸಂರಕ್ಷಕರಾಗಿ ಕಳೆದ 24 ವರ್ಷಗಳಿಂದ ವೇದಾಂತಭಾರತಿಯ ಎಲ್ಲ ಕಾರ್ಯಗಳಿಗೆ ತಮ್ಮ ದಿವ್ಯಾನುಗ್ರಹವನ್ನಿತ್ತು ಆಶೀರ್ವದಿಸುತ್ತಿರುವ ಪರಮಪೂಜ್ಯ ಶ್ರೀಶ್ರೀ ಜಗದ್ಗುರು ಮಹಾಸನ್ನಿಧಾನಂಗಳವರ ಸಂನ್ಯಾಸ್ವೀಕಾರ ಮಹೋತ್ಸವದ 50ನೇ ವರ್ಷದ ಪವಿತ್ರಸಂದರ್ಭದಲ್ಲಿ ಶ್ರೀಶಂಕರಭಗವತ್ಪಾದರ ಸ್ತೋತ್ರಸಮರ್ಪಣೆಯ ಮೂಲಕ

ಜಗದ್ಗುರುಗಳವರಿಗೆ ವಿಶೇಷ ನಮನಗಳನ್ನು ಸಲ್ಲಿಸಿ ಅವರ ಅನುಗ್ರಹಕ್ಕೆ ಪಾತ್ರರಾಗಲು ಅವಕಾಶ ಲಭಿಸಿರುವುದು ನಮ್ಮೆಲ್ಲರ ಭಾಗ್ಯ.

ಈ ಹಿನ್ನೆಲೆಯಲ್ಲಿ ಜಗದ್ಗುರು ಸನ್ನಿಧಾನಂಗಳವರು ಆದೇಶಿಸಿದ ಕಲ್ಯಾಣವೃಷ್ಟಿಸ್ತವ, ಶಿವಪಂಚಾಕ್ಷರ ನಕ್ಷತ್ರಮಾಲಾ, ಲಕ್ಷ್ಮೀನೃಸಿಂಹಕರುಣಾರಸಸ್ತೋತ್ರ ಈ ಮೂರು ಸ್ತೋತ್ರಗಳ ವಿಶೇಷ ಮಹಾಭಿಯಾನವನ್ನು ಕೈಗೊಂಡಿದೆ. ಶ್ರೀ ಶಂಕರಭಗವತ್ಪಾದರಿಂದ ರಚಿತವಾದ ಈ ಮೂರೂ ಸ್ತೋತ್ರಗಳು ಪ್ರತಿಯೊಬ್ಬನಿಗೂ ಮನಃಶುದ್ಧಿಯನ್ನುಂಟುಮಾಡುವುದರ ಜೊತೆಗೆ ಇತರ ಫಲಗಳನ್ನು ನೀಡುವ ಸಾಮರ್ಥ್ಯವುಳ್ಳವುಗಳು. ಈ ಪವಿತ್ರ ಮಹಾಭಿಯಾನದಲ್ಲಿ ಸಮಸ್ತರೂ ಪಾಲ್ಗೊಂಡು ಈ ಸ್ತೋತ್ರಗಳನ್ನು ಅಭ್ಯಾಸ ಮಾಡಿ ಪಾರಾಯಣ ಮಾಡುವುದರ ಮೂಲಕ ಕೃತಾರ್ಥರಾಗಬೇಕೆಂದು ವೇದಾಂತಭಾರತಿಯು ಬಯಸುತ್ತದೆ.

ಶೋಭಕೃನ್ನಾಮ ಸಂ॥ದ ಭಾದ್ರಪದ ಕೃಷ್ಣ
ದ್ವಾದಶೀ, ಬುಧವಾರ 11–10–2023

ಡಾ॥ ಶ್ರೀಧರ ಹೆಗಡೆ
ನಿರ್ದೇಶಕರು ವೇದಾಂತಭಾರತೀ

# ॥ ಕಲ್ಯಾಣವೃಷ್ಟಿಸ್ತವಃ ॥

**ಕಲ್ಯಾಣವೃಷ್ಟಿಭಿರಿವಾಮೃತಪೂರಿತಾಭಿಃ**
**ಲಕ್ಷ್ಮೀಸ್ವಯಂವರಣಮಂಗಲದೀಪಿಕಾಭಿಃ ।**
**ಸೇವಾಭಿರಂಬ ತವ ಪಾದಸರೋಜಮೂಲೇ**
**ನಾಕಾರಿ ಕಿಂ ಮನಸಿ ಭಾಗ್ಯವತಾಂ ಜನಾನಾಮ್ ॥1॥**

ತಾಯೆ! ಭಾಗ್ಯವಂತರಾದ ನಿನ್ನ ಭಕ್ತರು ನಿನ್ನ ಪಾದಸೇವೆಯನ್ನು ಮಾಡುತ್ತಾರೆ. ಆ ಸೇವೆಯೆಂದರೆ ಅಮೃತವನ್ನು ಸುರಿಸುವ ಮಂಗಳದ ಮಳೆ ಇದ್ದಂತೆ; ಲಕ್ಷ್ಮೀಸ್ವಯಂವರದಲ್ಲಿಯ ದೀಪವಿದ್ದಂತೆ. ಇಂಥ ಭಕ್ತರ ಮನಸ್ಸಿಗೆ ನೀನು ಏನನ್ನು ತಾನೆ ಕೊಡಲಿಲ್ಲ? (ಅವರ ಮನಸ್ಸುಗಳನ್ನು ಸಂತೋಷ, ಉಲ್ಲಾಸ, ತೃಪ್ತಿಗಳಿಂದ ತುಂಬಿದ್ದೀಯೆ.)

**ಏತಾವದೇವ ಜನನಿ ಸ್ಪೃಹಣೀಯಮಾಸ್ತೇ**
**ತ್ವದ್ವಂದನೇಷು ಸಲಿಲಸ್ಥಗಿತೇ ಚ ನೇತ್ರೇ ।**
**ಸಾನ್ನಿಧ್ಯಮುದ್ಯದರುಣಾಯುತಸೋದರಸ್ಯ**
**ತ್ವದ್ವಿಗ್ರಹಸ್ಯ ಪರಯಾ ಸುಧಯಾಪ್ಲುತಸ್ಯ ॥2॥**

ತಾಯೆ! ನಾನು ಈ ಎರಡನ್ನು ಹೆಚ್ಚಾಗಿ ಇಷ್ಟಪಡುತ್ತೇನೆ. ಒಂದು ನಿನ್ನನ್ನು ನಮಿಸುವಾಗ ನನ್ನ ಕಣ್ಣುಗಳು ನೀರಿನಿಂದ ತುಂಬಿಕೊಳ್ಳುವುದು. ಎರಡನೆಯದು ಅಮೃತದಿಂದ ತೊಳೆದಂತಿರುವ, ಸಾವಿರಾರು ಅರುಣರ ಕಾಂತಿಗೆ ಸಮಾನವಾದ ನಿನ್ನ ವಿಗ್ರಹದ ಸಾಮೀಪ್ಯ.

**ಈಶತ್ವನಾಮಕಲುಷಾಃ ಕತಿ ವಾ ನ ಸಂತಿ**
**ಬ್ರಹ್ಮಾದಯಃ ಪ್ರತಿಭವಂ ಪ್ರಲಯಾಭಿಭೂತಾಃ ।**
**ಏಕಃ ಸ ಏವ ಜನನಿ ಸ್ಥಿರಸಿದ್ಧಿರಾಸ್ತೇ**
**ಯಃ ಪಾದಯೋಸ್ತವ ಸಕೃತ್ಪ್ರಣತಿಂ ಕರೋತಿ ॥3॥**

ತಾಯೆ! ಎಷ್ಟೊಂದು ದೇವರುಗಳಿದ್ದಾರೆ! ಆದರೆ ಅವರೆಲ್ಲ ಪ್ರತಿ ಸೃಷ್ಟಿಯಲ್ಲಿಯೂ ಪ್ರಳಯಕ್ಕೆ ಒಳಗಾಗುವವರೆ. (ನಾಶ ಹೊಂದುವವರೆ). ಈಶ್ವರ ಎಂಬ ಹೆಸರಿಗೆ ಅವರು ಕಲಂಕಪ್ರಾಯರು. ಯಾವನು ನಿನ್ನನ್ನು ಒಮ್ಮೆಯಾದರೂ ನಮಸ್ಕರಿಸುತ್ತಾನೋ ಅಂಥವನಲ್ಲಿ ಅಣಿಮಾದಿ ಸಿದ್ಧಿಗಳು ಸ್ಥಿರವಾಗಿ ನೆಲೆಸುತ್ತವೆ ಹಾಗೂ ಅವನು ಶಾಶ್ವತವಾಗಿ ಈಶ್ವರನೆನಿಸಿಕೊಳ್ಳುತ್ತಾನೆ.

**ಲಬ್ಧ್ವಾ ಸಕೃತ್ತ್ರಿಪುರಸುಂದರಿ ತಾವಕೀನಂ**
**ಕಾರುಣ್ಯಕಂದಲಿತಕಾಂತಿಭರಂ ಕಟಾಕ್ಷಮ್ ।**
**ಕಂದರ್ಪಕೋಟಿಸುಭಗಾಸ್ತ್ವಯಿ ಭಕ್ತಿಭಾಜಃ**
**ಸಂಮೋಹಯಂತಿ ತರುಣೀರ್ಭುವನತ್ರಯೇಽಪಿ ॥4॥**

ತಾಯೆ! ನಿನ್ನ ಕಾಂತಿಪೂರ್ಣವಾದ ಆ ಕಟಾಕ್ಷಗಳು ನಿನ್ನ ಭಕ್ತರಮೇಲೆ ಒಮ್ಮೆ ಬಿದ್ದರೂ ಸಾಕು. ಅವರು ಕೋಟಿ ಮನ್ಮಥರಿಗೆ ಸಮಾನವಾದ ಸೌಂದರ್ಯವನ್ನು ಪಡೆಯುತ್ತಾರೆ. ಮೂರೂ ಲೋಕಗಳ ತರುಣಿಯರನ್ನು ತಮ್ಮ ಸೌಂದರ್ಯದಿಂದ ಆಕರ್ಷಿಸಬಲ್ಲವರಾಗುತ್ತಾರೆ.

**ಹ್ರೀಂಕಾರಮೇವ ತವ ನಾಮ ಗೃಣಂತಿ ವೇದಾ**
**ಮಾತಸ್ತ್ರಿಕೋಣನಿಲಯೇ ತ್ರಿಪುರೇ ತ್ರಿನೇತ್ರೇ ।**
**ತ್ವತ್ಸಂಸ್ಮೃತೌ ಯಮಭಟಾಭಿಭವಂ ವಿಹಾಯ**
**ದೀವ್ಯಂತಿ ನಂದನವನೇ ಸಹ ಲೋಕಪಾಲೈಃ ॥5॥**

ತಾಯೆ! ಶ್ರೀಚಕ್ರವಾಸಿನಿಯೂ, ತ್ರಿಪುರೆಯೂ, ತ್ರಿನೇತ್ರೆಯೂ ಆದ ನಿನ್ನನ್ನು ವೇದಗಳು ಹ್ರೀಂಕಾರ ವಾಚ್ಯಳು (ಹ್ರೀಂ ಎಂಬ ಹೆಸರುಳ್ಳವಳು) ಎಂದು ಹೇಳುತ್ತವೆ. ಮರಣಕಾಲದಲ್ಲಿ ನಿನ್ನನ್ನು ಸ್ಮರಿಸುತ್ತ ಪ್ರಾಣಬಿಟ್ಟ ನಿನ್ನ ಭಕ್ತರಿಗೆ ಯಮದೂತರ ಹೆದರಿಕೆಯಿರುವುದಿಲ್ಲ. ಆ ಭಕ್ತರು ಸ್ವರ್ಗವನ್ನು ಸೇರಿ ಅಲ್ಲಿರುವ ನಂದನವನದಲ್ಲಿ ಲೋಕಪಾಲಕರೊಡನೆ ವಿಹರಿಸುತ್ತಾರೆ.

**ಹಂತುಃ ಪುರಾಮಧಿಗಲಂ ಪರಿಪೀಯಮಾನಃ**
**ಕ್ರೂರಃ ಕಥಂ ನ ಭವಿತಾ ಗರಲಸ್ಯ ವೇಗಃ ।**
**ನಾಶ್ವಾಸನಾಯ ಯದಿ ಮಾತರಿದಂ ತವಾರ್ಧಂ**
**ದೇಹಸ್ಯ ಶಶ್ವದಮೃತಾಪ್ಲುತಶೀತಲಸ್ಯ ॥6॥**

ತಾಯೆ! ತ್ರಿಪುರಾಂತಕನಾದ ಶಿವನು ಕುಡಿದಂಥ ವಿಷ ಅವನಿಗೆ ಬಾಧೆಯನ್ನೇನೂ ಉಂಟುಮಾಡಲಿಲ್ಲ. ಅದಕ್ಕೆ ಕಾರಣ ಅವನ ದೇಹದ ಅರ್ಧಭಾಗವೇ ನೀನಾಗಿದ್ದದ್ದು. ನಿನ್ನ ದೇಹದ ಅಮೃತದಿಂದ ತೋಯ್ದು ಶೀತಲವಾಗಿದೆ. ಇಂಥ ದೇಹದ ಆಸರೆ ಶಿವನಿಗಿಲ್ಲದಿದ್ದರೆ ಆ ಕ್ರೂರ ವಿಷವನ್ನು ಅವನು ಹೇಗೆ ತಾನೆ ಸಹಿಸಿಕೊಳ್ಳುತ್ತಿದ್ದ?

**ಸರ್ವಜ್ಞತಾಂ ಸದಸಿ ವಾಕ್ಪಟುತಾಂ ಪ್ರಸೂತೇ**
**ದೇವಿ ತ್ವದಂಘ್ರಿಸರಸೀರುಹಯೋಃ ಪ್ರಣಾಮಃ ।**
**ಕಿಂ ಚ ಸ್ಫುರನ್ಮಕುಟಮುಜ್ಜ್ವಲಮಾತಪತ್ರಂ**
**ದ್ವೇ ಚಾಮರೇ ಚ ಮಹತೀಂ ವಸುಧಾಂ ದದಾತಿ ॥7॥**

ದೇವಿ! ನಿನ್ನ ಪಾದಗಳಿಗೆ ಮಾಡುವ ನಮಸ್ಕಾರವು ನಮಗೆ ಸರ್ವಜ್ಞತ್ವವನ್ನೂ, ಉತ್ತಮ ಭಾಷಣ ಸಾಮರ್ಥ್ಯವನ್ನೂ ತಂದುಕೊಡುತ್ತದೆ. ಅಷ್ಟೇ ಅಲ್ಲ, ಕಿರೀಟ, ಛತ್ರ, ಚಾಮರಗಳಿಂದ ಕೂಡಿದ ಚಕ್ರವರ್ತಿಪದವಿಯನ್ನೇ ಭಕ್ತರಿಗೆ ನೀಡುತ್ತದೆ.

ಕಲ್ಪದ್ರುಮೈರಭಿಮತಪ್ರತಿಪಾದನೇಷು
ಕಾರುಣ್ಯವಾರಿಧಿಭಿರಂಬ ಭವತ್ಕಟಾಕ್ಷೈಃ ।
ಆಲೋಕಯ ತ್ರಿಪುರಸುಂದರಿ ಮಾಮನಾಥಂ
ತ್ವಯ್ಯೇವ ಭಕ್ತಿಭರಿತಂ ತ್ವಯಿ ಬದ್ಧತೃಷ್ಣಮ್ ॥8॥

ತಾಯೆ! ನಿನ್ನ ನೋಟವೆಂದರೆ ಕಲ್ಪವೃಕ್ಷದಂತೆ ಬೇಡಿದ್ದನ್ನು ಕೊಡುವಂಥದು. ಕರುಣೆಯನ್ನೇ ತುಂಬಿಕೊಂಡದ್ದು. ಆ ನೋಟಗಳಿಂದ ನನ್ನನ್ನೊಮ್ಮೆ ನೋಡು. ನಾನು ಅನಾಥನು. ನಿನ್ನಲ್ಲೇ ಭಕ್ತಿಯನ್ನಿಟ್ಟವನು. ನೀನು ನನ್ನನ್ನು ಉದ್ಧರಿಸುತ್ತೀಯೆಂಬ ಆಶೆಯನ್ನು ಹೊಂದಿದವನು. ನನ್ನನ್ನು ಉದ್ಧರಿಸು.

**ಹಂತೇತರೇಷ್ವಪಿ ಮನಾಂಸಿ ನಿಧಾಯ ಚಾನ್ಯೇ**
**ಭಕ್ತಿಂ ವಹಂತಿ ಕಿಲ ಪಾಮರದೈವತೇಷು ।**
**ತ್ವಾಮೇವ ದೇವಿ ಮನಸಾ ಸಮನುಸ್ಮರಾಮಿ**
**ತ್ವಾಮೇವ ನೌಮಿ ಶರಣಂ ಜನನಿ ತ್ವಮೇವ ॥9॥**

ತಾಯೆ! ಇನ್ನು ಕೆಲವರು ಬೇರೆ ಬೇರೆ ಸಣ್ಣಪುಟ್ಟ ದೇವತೆಗಳಲ್ಲಿ ಮನಸ್ಸಿಟ್ಟು ಭಕ್ತಿಯನ್ನು ತೋರಿಸುತ್ತಾರೆ. ನಾನಾದರೋ ನಿನ್ನ ಸ್ಮರಣೆಯನ್ನೇ ಮಾಡುತ್ತ ನಿನಗೇ ನಮಸ್ಕಾರವನ್ನು ಅರ್ಪಿಸುತ್ತೇನೆ. ನಿನ್ನನ್ನೇ ಶರಣು ಹೋಗುತ್ತೇನೆ.

**ಲಕ್ಷ್ಯೇಷು ಸತ್ಸ್ವಪಿ ಕಟಾಕ್ಷನಿರೀಕ್ಷಣಾನಾಮ್**
**ಆಲೋಕಯ ತ್ರಿಪುರಸುಂದರಿ ಮಾಂ ಕದಾಚಿತ್ ।**
**ನೂನಂ ಮಯಾ ತು ಸದೃಶಃ ಕರುಣೈಕಪಾತ್ರಂ**
**ಜಾತೋ ಜನಿಷ್ಯತಿ ಜನೋ ನ ಚ ಜಾಯತೇ ವಾ ॥10॥**

ಜನನಿ! ನೀನು ಲೋಕಮಾತೆಯಾದುದರಿಂದ ನಿನ್ನ ಕರುಣಾದೃಷ್ಟಿಗೆ ಅರ್ಹರಾದ ಜನ ಎಷ್ಟೋ ಇದ್ದಾರೆ. ಆದರೆ ಎಂದಾದರೊಮ್ಮೆ ನನ್ನನ್ನೂ ನೋಡು. ಏಕೆಂದರೆ ನಿನ್ನ ದಯೆಗೆ ಅರ್ಹನಾದ ನನ್ನಂಥ ವ್ಯಕ್ತಿ ಭೂತ–ಭವಿಷ್ಯತ್–ವರ್ತಮಾನ ಕಾಲಗಳಲ್ಲಿ ಯಾರೂ ಇರಲಿಕ್ಕಿಲ್ಲ.

**ಹ್ರೀಂಹ್ರೀಮಿತಿ ಪ್ರತಿದಿನಂ ಜಪತಾಂ ತವಾಖ್ಯಾಂ**
**ಕಿಂ ನಾಮ ದುರ್ಲಭಮಿಹ ತ್ರಿಪುರಾಧಿವಾಸೇ ।**
**ಮಾಲಾಕಿರೀಟಮದವಾರಣಮಾನನೀಯಾ**
**ತಾನ್ಸೇವತೇ ವಸುಮತೀ ಸ್ವಯಮೇವ ಲಕ್ಷ್ಮೀಃ ॥11॥**

ತಾಯೆ! ಹ್ರೀಂ ಹ್ರೀಂ ಎಂಬ ನಿನ್ನ ಶುಭನಾಮವನ್ನು ಯಾರು ಪ್ರತಿದಿನ ಪಠಿಸುತ್ತಾರೋ ಅವರಿಗೆ ಈ ಪ್ರಪಂಚದಲ್ಲಿ ದುರ್ಲಭವಾದದ್ದು ಯಾವುದೂ ಇಲ್ಲ. ಹಾರ ಕಿರೀಟಗಳನ್ನು ಧರಿಸಿ ಮದ್ದಾನೆಯ ಮೇಲೆ ಮೆರೆಯುವ ಲಕ್ಷ್ಮೀದೇವಿಯೆ ಧನಧಾನ್ಯ ಸ್ವರೂಪಳಾಗಿ ಅವರ ಬಳಿಗೆ ಬರುತ್ತಾಳೆ. ಅವರ ಸೇವೆಗೈಯ್ಯುತ್ತಾಳೆ.

**ಸಂಪತ್ಕರಾಣಿ ಸಕಲೇಂದ್ರಿಯನಂದನಾನಿ**
**ಸಾಮ್ರಾಜ್ಯದಾನನಿರತಾನಿ ಸರೋರುಹಾಕ್ಷಿ ।**
**ತ್ವದ್ವಂದನಾನಿ ದುರಿತಾಹರಣೋದ್ಯತಾನಿ**
**ಮಾಮೇವ ಮಾತರನಿಶಂ ಕಲಯಂತು ನಾನ್ಯಮ್ ॥12॥**

ತಾಯೆ! ನಿನಗೆ ಮಾಡುವ ನಮಸ್ಕಾರವು ಭಕ್ತರಿಗೆ ಸಕಲ ಸಂಪತ್ತುಗಳನ್ನೂ ಕರುಣಿಸುತ್ತದೆ. ನಮಸ್ಕರಿಸಿದವರ ಸಕಲೇಂದ್ರಿಯಗಳೂ ಆನಂದವನ್ನು ಹೊಂದುತ್ತವೆ. ಅದು ಭಕ್ತರಿಗೆ ಸಾಮ್ರಾಜ್ಯವನ್ನು ನೀಡಬಲ್ಲದು. ಸಕಲಪಾಪಗಳನ್ನೂ ತೊಳೆಯಬಲ್ಲದು. ಅಂಥ ನಮಸ್ಕಾರವನ್ನು ಮಾಡುವ ಸ್ವಭಾವ ಸದಾ ನನ್ನದಾಗಿರಲಿ. ಆ ನಮಸ್ಕಾರದ ಅನುಗ್ರಹ ಸದಾ ನನ್ನ ಮೇಲಿರಲಿ.

**ಕಲ್ಪೋಪಸಂಹೃತಿಷು ಕಲ್ಪಿತತಾಂಡವಸ್ಯ**
**ದೇವಸ್ಯ ಖಂಡಪರಶೋಃ ಪರಭೈರವಸ್ಯ ।**
**ಪಾಶಾಂಕುಶೈಕ್ಷವಶರಾಸನಪುಷ್ಪಬಾಣಾ**
**ಸಾ ಸಾಕ್ಷಿಣೀ ವಿಜಯತೇ ತವ ಮೂರ್ತಿರೇಕಾ ॥13॥**

ಕಲ್ಪಾಂತಕಾಲದಲ್ಲಿ ಶಿವನು ಉಗ್ರಭೈರವರೂಪವನ್ನು ತಾಳಿ ತಾಂಡವ ನಾಟ್ಯವಾಡುತ್ತ ಪ್ರಪಂಚದ ಸಂಹಾರದಲ್ಲಿ ನಿರತನಾಗಿರುತ್ತಾನೆ. ಆ ಸಮಯದಲ್ಲಿ ವಿಶ್ವವೆಲ್ಲ ಪ್ರಳಯಕ್ಕೆ ವಶವಾದರೂ ಸಹ ನೀನು ಒಬ್ಬಳೇ ಬಿಲ್ಲು, ಬಾಣ, ಪಾಶ, ಅಂಕುಶಗಳನ್ನು ಧರಿಸಿ ಆ ಮಹಾಪ್ರಲಯಕ್ಕೆ ಸಾಕ್ಷಿಯಾಗಿರುತ್ತೀಯೆ.

**ಲಗ್ನಂ ಸದಾ ಭವತು ಮಾತರಿದಂ ತವಾರ್ಧಂ**
**ತೇಜಃ ಪರಂ ಬಹುಲಕುಂಕುಮಪಂಕಶೋಣಮ್ ।**
**ಭಾಸ್ವತ್ಕಿರೀಟಮಮೃತಾಂಶುಕಲಾವತಂಸಂ**
**ಮಧ್ಯೇ ತ್ರಿಕೋಣನಿಲಯಂ ಪರಮಾಮೃತಾರ್ದ್ರಮ್ ॥14॥**

ತಾಯೆ! ತಲೆಯ ಮೇಲೆ ಹೊಳೆಯುವ ಕಿರೀಟವನ್ನು ಧರಿಸಿರುವೆ. ಚಂದ್ರಕಲೆಯನ್ನು ಮುಡಿದಿರುವೆ. ಶ್ರೀಚಕ್ರಮಧ್ಯದಲ್ಲಿ ವಾಸವಾಗಿರುವೆ. ಅಮೃತಾಭಿಷಿಕ್ತೆಯಾಗಿ ಕೇಸರರಸವನ್ನು ಲೇಪಿಸಿಕೊಂಡಿರುವೆ. ಇಂಥ ತೇಜಃಪುಂಜವಾದ ನಿನ್ನ ಶರೀರ ನನ್ನ ಮನಸ್ಸಿನಲ್ಲಿ ಸದಾ ನೆಲೆಸಿರಲಿ.

**ಹ್ರೀಂಕಾರಮೇವ ತವ ನಾಮ ತದೇವ ರೂಪಂ**
**ತ್ವನ್ನಾಮ ದುರ್ಲಭಮಿಹ ತ್ರಿಪುರೇ ಗೃಣಂತಿ ।**
**ತ್ವತ್ತೇಜಸಾ ಪರಿಣತಂ ವಿಯದಾದಿಭೂತಂ**
**ಸೌಖ್ಯಂ ತನೋತಿ ಸರಸೀರುಹಸಂಭವಾದೇಃ ॥15॥**

ದೇವಿ! ಹ್ರೀಂ ಎಂಬ ಅಕ್ಷರವೇ ನಿನ್ನ ಹೆಸರು ಮತ್ತು ರೂಪ. ಇಂಥ ದುರ್ಲಭವಾದ ನಿನ್ನ ನಾಮವನ್ನು ಲೋಕದಲ್ಲಿ ಜನರು ಜಪಿಸುತ್ತಾರೆ. ನಿನ್ನ ತೇಜಸ್ಸೇ ಪಂಚಭೂತವಾಗಿ ಪರಿಣಾಮ ಹೊಂದಿದೆ. ಆ ಪಂಚಭೂತಗಳು ಬ್ರಹ್ಮಾದಿದೇವತೆಗಳ ಸುಖವನ್ನು ಹೆಚ್ಚಿಸುತ್ತವೆ.

**ಹ್ರೀಂಕಾರತ್ರಯಸಂಪುಟೇನ ಮಹತಾ ಮಂತ್ರೇಣ ಸಂದೀಪಿತಂ**
**ಸ್ತೋತ್ರಂ ಯಃ ಪ್ರತಿವಾಸರಂ ತವ ಪುರೋ ಮಾತರ್ಜಪೇನ್ಮಂತ್ರವಿತ್ ।**

**ತಸ್ಯ ಕ್ಷೋಣಿಭುಜೋ ಭವಂತಿ ವಶಗಾ ಲಕ್ಷ್ಮೀಶ್ಚಿರಸ್ಥಾಯಿನೀ**
**ವಾಣೀ ನಿರ್ಮಲಸೂಕ್ತಿಭಾರಭರಿತಾ ಜಾಗರ್ತಿ ದೀರ್ಘಂ ವಯಃ ||16||**

ತಾಯೆ! ನಿನ್ನ ಮಂತ್ರವು ಮೂರು ಹ್ರೀಂಕಾರವನ್ನೊಳಗೊಂಡಿದೆ. ಈ ಮಹಾಮಂತ್ರದಿಂದ ಪ್ರಭಾವಿತವಾದ ಈ ಸ್ತೋತ್ರವನ್ನು ಪ್ರತಿದಿನವೂ ನಿನ್ನ ವಿಗ್ರಹದ ಮುಂದೆ ಜಪಿಸಿದರೆ ರಾಜಮಹಾರಾಜರುಗಳೆಲ್ಲ ಅವನ ವಶಕ್ಕೆ ಬರುತ್ತಾರೆ. ಸಂಪತ್ತು ಅವನ ಮನೆಯಲ್ಲಿ ಸ್ಥಿರವಾಗಿ ನೆಲೆಸಿರುತ್ತದೆ. ಅವನ ಮಾತು ಸ್ವಚ್ಛ ಹಾಗೂ ಉತ್ತಮವಾಗಿರುತ್ತದೆ. ಅವನು ದೀರ್ಘಾಯುಷ್ಯವನ್ನು ಪಡೆದು ಬಹುಕಾಲ ಬಾಳುತ್ತಾನೆ.

****************

## ॥ ಶಿವಪಂಚಾಕ್ಷರನಕ್ಷತ್ರಮಾಲಾಸ್ತೋತ್ರಮ್ ॥

**ಶ್ರೀಮದಾತ್ಮನೇ ಗುಣೈಕಸಿಂಧವೇ ನಮಃ ಶಿವಾಯ**
**ಧಾಮಲೇಶಧೂತಕೋಕಬಂಧವೇ ನಮಃ ಶಿವಾಯ ।**
**ನಾಮಶೇಷಿತಾನಮದ್ಭವಾಂಧವೇ ನಮಃ ಶಿವಾಯ**
**ಪಾಮರೇತರಪ್ರಧಾನಬಂಧವೇ ನಮಃ ಶಿವಾಯ ॥ 1 ॥**

ಪರಶಿವನು, ಮಹಿಮಾನ್ವಿತನು, ಗುಣಸಾಗರನು ಅವನ ತೇಜಸ್ಸಿನ ಅಲ್ಪಾಂಶವೂ ಸಹ ಸೂರ್ಯನ ತೇಜಸ್ಸನ್ನು ಮೀರಿಸುವಂಥದು. ಭಕ್ತರ ಸಂಸಾರಬಂಧನವನ್ನು ಬಿಡಿಸುವ ಜ್ಞಾನಿಗಳ ಬಂಧುವಾದ ಶಿವನಿಗೆ ನಮಸ್ಕಾರಗಳು.

**ಕಾಲಭೀತವಿಪ್ರಬಾಲಪಾಲ ತೇ ನಮಃ ಶಿವಾಯ**
**ಶೂಲಭಿನ್ನದುಷ್ಟದಕ್ಷಫಾಲ ತೇ ನಮಃ ಶಿವಾಯ ।**
**ಮೂಲಕಾರಣಾಯ ಕಾಲಕಾಲ ತೇ ನಮಃ ಶಿವಾಯ**
**ಪಾಲಯಾಧುನಾ ದಯಾಲವಾಲ ತೇ ನಮಃ ಶಿವಾಯ ॥2॥**

ಶಿವನೆ! ನೀನು ಯಮನಿಗೂ ಮೃತ್ಯುಸ್ವರೂಪನು. ಮಾರ್ಕಂಡೇಯನನ್ನು ಯಮನಿಂದ ಕಾಪಾಡಿದವನು. ದಕ್ಷನ ಹಣೆಯನ್ನು ಸೀಳಿದವನು. ವಿಶ್ವಕಾರಣನಾದ ನಿನಗೆ ನಮಸ್ಕಾರ. ನನ್ನನ್ನು ಕಾಪಾಡು.

**ಇಷ್ಟವಸ್ತುಮುಖ್ಯದಾನಹೇತವೇ ನಮಃ ಶಿವಾಯ**
**ದುಷ್ಟದೈತ್ಯವಂಶಧೂಮಕೇತವೇ ನಮಃ ಶಿವಾಯ**
**ಸೃಷ್ಟಿರಕ್ಷಣಾಯ ಧರ್ಮಸೇತವೇ ನಮಃ ಶಿವಾಯ**
**ಅಷ್ಟಮೂರ್ತಯೇ ವೃಷೇಂದ್ರಕೇತವೇ ನಮಃ ಶಿವಾಯ ॥3॥**

ಶಿವನು ಇಷ್ಟಾರ್ಥಗಳನ್ನು ನೆರವೇರಿಸುವವನು. ದೈತ್ಯಕುಲನಾಶಕನು, ಲೋಕರಕ್ಷಕನು, ಧರ್ಮಪಾಲಕನು ಎಂಟು ರೂಪಗಳಿಂದ ಶೋಭಿಸುವ ಆ ಶಿವನಿಗೆ ನಮಸ್ಕಾರ.

**ಆಪದದ್ರಿಭೇದಟಂಕಹಸ್ತ ತೇ ನಮಃ ಶಿವಾಯ**
**ಪಾಪಹಾರಿದಿವ್ಯಸಿಂಧುಮಸ್ತ ತೇ ನಮಃ ಶಿವಾಯ**
**ಪಾಪದಾರಿಣೇ ಲಸನ್ನಮಸ್ತತೇ ನಮಃ ಶಿವಾಯ**
**ಶಾಪದೋಷಖಂಡನಪ್ರಶಸ್ತ ತೇ ನಮಃ ಶಿವಾಯ ॥4॥**

ಶಿವನೆ! ನೀನು ಭಕ್ತರ ಕಷ್ಟಗಳನ್ನು ದೂರಮಾಡುವವನು, ಗಂಗಾಧರನು, ಭಕ್ತರಿಂದ ಸದಾ ನಮಿಸಲ್ಪಡುವವನು, ಶಾಪದೋಷವನ್ನು ನಿವಾರಿಸುವವನು. ಪಾಪನಾಶಕನಾದ ನಿನಗೆ ನಮಸ್ಕಾರ.

**ವ್ಯೋಮಕೇಶ ದಿವ್ಯಭವ್ಯರೂಪ ತೇ ನಮಃ ಶಿವಾಯ**
**ಹೇಮಮೇದಿನೀಧರೇಂದ್ರಚಾಪ ತೇ ನಮಃ ಶಿವಾಯ ।**
**ನಾಮಮಾತ್ರದಗ್ಧಸರ್ವಪಾಪ ತೇ ನಮಃ ಶಿವಾಯ**
**ಕಾಮನೈಕತಾನಹೃದ್ದುರಾಪ ತೇ ನಮಃ ಶಿವಾಯ ॥5॥**

ಶಿವನೆ! ನೀನು ನಭೋವ್ಯಾಪಿಯಾದ ಕೇಶರಾಶಿಯುಳ್ಳವನು. ಮೇರುಪರ್ವತವನ್ನೇ ಬಿಲ್ಲಾಗಿ ಮಾಡಿಕೊಂಡವನು. ನಿನ್ನ ನಾಮ ಸ್ಮರಣೆಯು ಸರ್ವಪಾಪನಾಶಕವು. ಮನಸ್ಸಿನ ತುಂಬ ಕಾಮನೆಗಳನ್ನು ತುಂಬಿಕೊಂಡವರಿಗೆ ನೀನು ಸಿಗಲಾರೆ. ನಿನಗೆ ನಮಸ್ಕಾರ.

**ಬ್ರಹ್ಮಮಸ್ತಕಾವಲೀನಿಬದ್ಧ ತೇ ನಮಃ ಶಿವಾಯ**
**ಜಿಹ್ಮಗೇಂದ್ರಕುಂಡಲಪ್ರಸಿದ್ಧ ತೇ ನಮಃ ಶಿವಾಯ**
**ಬ್ರಹ್ಮಣೇ ಪ್ರಣೀತವೇದಪದ್ಧತೇ ನಮಃ ಶಿವಾಯ**
**ಜಿಹ್ಮಕಾಲದೇಹದತ್ತಪದ್ಧತೇ ನಮಃ ಶಿವಾಯ ||6||**

ಶಿವನೇ! ನೀನು ವೇದಾಂತಗಳಲ್ಲಿ ವರ್ಣಿಸಲ್ಪಟ್ಟವನು, ನಾಗಕುಂಡಲ-ಗಳನ್ನು ಧರಿಸಿದವನು, ವೈದಿಕಮಾರ್ಗವನ್ನು ಸ್ಥಾಪಿಸಿದವನು, ಮೃತ್ಯುವನ್ನು ಮೆಟ್ಟಿದವನು, ಪರಬ್ರಹ್ಮಸ್ವರೂಪಿಯಾದ ನಿನಗೆ ನಮಸ್ಕಾರ.

**ಕಾಮನಾಶನಾಯ ಶುದ್ಧಕರ್ಮಣೇ ನಮಃ ಶಿವಾಯ**
**ಸಾಮಗಾನಜಾಯಮಾನಶರ್ಮಣೇ ನಮಃ ಶಿವಾಯ ।**
**ಹೇಮಕಾಂತಿಚಾಕಚಕ್ಯವರ್ಮಣೇ ನಮಃ ಶಿವಾಯ**
**ಸಾಮಜಾಸುರಾಂಗಲಬ್ಧಚರ್ಮಣೇ ನಮಃ ಶಿವಾಯ ॥7॥**

ಶಿವನು ಕಾಮನನ್ನು ಸುಟ್ಟವನು, ಶುದ್ಧಚರಿತ್ರನು, ಸಾಮಗಾನದಿಂದ ಸಂತೋಷಪಡುವವನು, ಅಪ್ಪಟ ಚಿನ್ನದಂತೆ ನಿಷ್ಕಳಂಕವಾದ ಲೀಲೆಯುಳ್ಳವನು, ಗಜಾಜಿನವನ್ನುಟ್ಟವನು, ಇಂಥ ಶಿವನಿಗೆ ನಮಸ್ಕಾರ.

**ಜನ್ಮಮೃತ್ಯುಘೋರದುಃಖಹಾರಿಣೇ ನಮಃ ಶಿವಾಯ**
**ಚಿನ್ಮಯೈಕರೂಪದೇಹಧಾರಿಣೇ ನಮಃ ಶಿವಾಯ ।**
**ಮನ್ಮನೋರಥಾವಪೂರ್ತಿಕಾರಿಣೇ ನಮಃ ಶಿವಾಯ**
**ಸನ್ಮನೋಗತಾಯ ಕಾಮವೈರಿಣೇ ನಮಃ ಶಿವಾಯ ॥8॥**

ಶಿವನು ಜನನಮರಣಗಳಿಂದ ಕೂಡಿದ ಸಂಸಾರದುಃಖವನ್ನು ಪರಿಹರಿಸುವವನು, ಚಿನ್ಮಯನು, ನಮ್ಮ ಇಷ್ಟಾರ್ಥಗಳನ್ನು ಪೂರೈಸುವವನು. ಸಜ್ಜನರು ಸದಾ ಆತನನ್ನು ಧ್ಯಾನಿಸುತ್ತಾರೆ. ಕಾಮನನ್ನು ಸುಟ್ಟ ಆ ಶಿವನಿಗೆ ನಮಸ್ಕಾರ.

**ಯಕ್ಷರಾಜಬಂಧವೇ ದಯಾಲವೇ ನಮಃ ಶಿವಾಯ**
**ದಕ್ಷಪಾಣಿಶೋಭಿಕಾಂಚನಾಲವೇ ನಮಃ ಶಿವಾಯ**
**ಪಕ್ಷಿರಾಜವಾಹಹೃಚ್ಛಯಾಲವೇ ನಮಃ ಶಿವಾಯ**
**ಅಕ್ಷಿಫಾಲ ವೇದಪೂತತಾಲವೇ ನಮಃ ಶಿವಾಯ ॥9॥**

ಶಿವನಿಗೆ ಹಣೆಯಲ್ಲಿ ಒಂದು ಕಣ್ಣು, ಆತನು ಕುಬೇರನ ಮಿತ್ರನು, ಕರುಣಾನಿಧಿಯು, ಬಲಗೈಯಲ್ಲಿ ಕಮಂಡಲವನ್ನು ಹಿಡಿದಿದ್ದಾನೆ. ಕಂಠದಿಂದ ಸದಾ ವೇದೋಚ್ಚಾರಣೆ ಮಾಡುತ್ತಿರುತ್ತಾನೆ. ವಿಷ್ಣುವಿನಿಂದಲೂ ಸ್ಮರಿಸಲ್ಪಡುತ್ತಿರುವ ಶಿವನಿಗೆ ನಮಸ್ಕಾರಗಳು.

**ದಕ್ಷಹಸ್ತನಿಷ್ಠಜಾತವೇದಸೇ ನಮಃ ಶಿವಾಯ**
**ಅಕ್ಷರಾತ್ಮನೇ ನಮದ್ಬಿಡೌಜಸೇ ನಮಃ ಶಿವಾಯ ।**
**ದೀಕ್ಷಿತಪ್ರಕಾಶಿತಾತ್ಮತೇಜಸೇ ನಮಃ ಶಿವಾಯ**
**ಉಕ್ಷರಾಜವಾಹ ತೇ ಸತಾಂ ಗತೇ ನಮಃ ಶಿವಾಯ ॥10॥**

ಪ್ರಣವಸ್ವರೂಪಿಯಾದ ಶಿವನು ಬಲಗೈಯಲ್ಲಿ ಅಗ್ನಿಯನ್ನು ಧರಿಸಿದ್ದಾನೆ. ಇಂದ್ರನು ಸದಾ ಅವನಿಗೆ ನಮಿಸುತ್ತಾನೆ. ಯಜ್ಞದೀಕ್ಷಿತರು ಆತನನ್ನು ತಮ್ಮ ಹೃದಯಲ್ಲಿ ಕಂಡುಕೊಳ್ಳುತ್ತಾರೆ. ನಂದಿವಾಹನನಾದ ಆತನನ್ನೆ ಸಜ್ಜನರು ಸೇರುತ್ತಾರೆ. ಅಂಥ ಶಿವನಿಗೆ ನಮ್ಮ ನಮಸ್ಕಾರ.

**ರಾಜತಾಚಲೇಂದ್ರಸಾನುವಾಸಿನೇ ನಮಃ ಶಿವಾಯ**
**ರಾಜಮಾನನಿತ್ಯಮಂದಹಾಸಿನೇ ನಮಃ ಶಿವಾಯ**
**ರಾಜಕೋರಕಾವತಂಸಭಾಸಿನೇ ನಮಃ ಶಿವಾಯ**
**ರಾಜರಾಜಮಿತ್ರತಾಪ್ರಕಾಶಿನೇ ನಮಃ ಶಿವಾಯ ॥11॥**

ಶಿವನು ಕೈಲಾಸದಲ್ಲಿ ನೆಲೆಸಿದವನು. ಮಂದಹಾಸವು ಸದಾ ಅವನ ಮುಖದಲ್ಲಿ ಶೋಭಿಸುತ್ತಿರುತ್ತದೆ. ಕುಬೇರನ ಮಿತ್ರನಾದ ಆತನು ತಲೆಯಲ್ಲಿ ಚಂದ್ರನನ್ನು ಧರಿಸಿದ್ದಾನೆ. ಇಂಥ ಶಿವನಿಗೆ ನಮ್ಮ ನಮಸ್ಕಾರಗಳು.

**ದೀನಮಾನವಾಲಿಕಾಮಧೇನವೇ ನಮಃ ಶಿವಾಯ**
**ಸೂನಬಾಣದಾಹಕೃತ್ಕೃಶಾನವೇ ನಮಃ ಶಿವಾಯ**
**ಸ್ವಾನುರಾಗಭಕ್ತರತ್ನಸಾನವೇ ನಮಃ ಶಿವಾಯ**
**ದಾನವಾಂಧಕಾರಚಂಡಭಾನವೇ ನಮಃ ಶಿವಾಯ ॥12॥**

ಶಿವನು ದೀನರ ಕಾಮಧೇನು. ತನ್ನ ನೇತ್ರಾಗ್ನಿಯಿಂದ ಕಾಮನನ್ನು ಸುಟ್ಟವನು. ಭಕ್ತರಿಗೆ ಚಿನ್ನದ ಪರ್ವತದಂತೆ ಇರುವವನು. ರಾಕ್ಷಸರನ್ನು ಧ್ವಂಸಮಾಡುವವನು. ಆ ಶಿವನಿಗೆ ನಮ್ಮ ನಮಸ್ಕಾರ.

**ಸರ್ವಮಂಗಲಾಕುಚಾಗ್ರಶಾಯಿನೇ ನಮಃ ಶಿವಾಯ**
**ಸರ್ವದೇವತಾಗಣಾತಿಶಾಯಿನೇ ನಮಃ ಶಿವಾಯ**
**ಪೂರ್ವದೇವನಾಶಸಂವಿಧಾಯಿನೇ ನಮಃ ಶಿವಾಯ**
**ಸರ್ವಮನ್ಮನೋಜಭಂಗದಾಯಿನೇ ನಮಃ ಶಿವಾಯ ॥13॥**

ಶಿವನು ಪಾರ್ವತಿಯ ಎದೆಯ ಮೇಲೆ ವಿಶ್ರಮಿಸುವವನು. ಸಕಲ ದೇವತಾಗಣವನ್ನು ಮೀರಿದವನು. ರಾಕ್ಷಸರನ್ನು ನಾಶಮಾಡುವವನು. ನನ್ನ ಮನಸ್ಸಿನಲ್ಲಿರುವ ಕಾಮನೆಗಳನ್ನು ಧ್ವಂಸಮಾಡುವ ಶಿವನಿಗೆ ನಮಸ್ಕಾರ.

**ಸ್ತೋಕಭಕ್ತಿತೋಽಪಿ ಭಕ್ತಪೋಷಿಣೇ ನಮಃ ಶಿವಾಯ**
**ಮಾಕರಂದಸಾರವರ್ಷಿಭಾಷಿಣೇ ನಮಃ ಶಿವಾಯ**
**ಏಕಬಿಲ್ವದಾನತೋಽಪಿ ತೋಷಿಣೇ ನಮಃ ಶಿವಾಯ**
**ನೈಕಜನ್ಮಪಾಪಜಾಲಶೋಷಿಣೇ ನಮಃ ಶಿವಾಯ ॥14॥**

ಸ್ವಲ್ಪ ಭಕ್ತಿಯಿಂದಲೂ ಶಿವನು ಸಂತುಷ್ಟನಾಗುತ್ತಾನೆ. ಭಕ್ತರನ್ನು ಪೋಷಿಸುತ್ತಾನೆ. ಒಂದು ಬಿಲ್ವಪತ್ರೆಯನ್ನು ಅರ್ಪಿಸಿದರೂ ಸಾಕು, ಪ್ರಸನ್ನನಾಗುತ್ತಾನೆ. ಆತನ ಮಾತು ಜೇನು ಸುರಿದಂತೆ. ನಮ್ಮ ಅನೇಕ ಜನ್ಮಗಳಲ್ಲಿ ಸಂಚಿತವಾದ ಪಾಪವನ್ನು ನಾಶಮಾಡುವ ಶಿವನಿಗೆ ನಮಸ್ಕಾರ.

**ಸರ್ವಜೀವರಕ್ಷಣೈಕಶೀಲಿನೇ ನಮಃ ಶಿವಾಯ**
**ಪಾರ್ವತೀಪ್ರಿಯಾಯ ಭಕ್ತಪಾಲಿನೇ ನಮಃ ಶಿವಾಯ**
**ದುರ್ವಿದಗ್ಧದೈತ್ಯಸೈನ್ಯದಾರಿಣೇ ನಮಃ ಶಿವಾಯ**
**ಶರ್ವರೀಶಧಾರಿಣೇ ಕಪಾಲಿನೇ ನಮಃ ಶಿವಾಯ ॥15॥**

ಶಿವನು ಸಮಸ್ತಲೋಕದ ರಕ್ಷಕನು. ಪಾರ್ವತೀಪ್ರಿಯನಾದ ಆತನು ದುಷ್ಟರಾಕ್ಷಸರನ್ನು ಶಿಕ್ಷಿಸುವವನು. ಚಂದ್ರಶೇಖರನೂ ಕಪಾಲಧಾರಿಯೂ ಆದ ಆತನಿಗೆ ನಮಸ್ಕಾರಗಳು.

**ಪಾಹಿ ಮಾಮುಮಾಮನೋಜ್ಞದೇಹ ತೇ ನಮಃ ಶಿವಾಯ**
**ದೇಹಿ ಮೇ ವರಂ ಸಿತಾದ್ರಿಗೇಹ ತೇ ನಮಃ ಶಿವಾಯ**
**ಮೋಹಿತರ್ಷಿಕಾಮಿನೀಸಮೂಹ ತೇ ನಮಃ ಶಿವಾಯ**
**ಸ್ವೇಹಿತಪ್ರಸನ್ನ ಕಾಮದೋಹ ತೇ ನಮಃ ಶಿವಾಯ ॥16॥**

ಶಿವನು ಗಿರಿಜಾಪ್ರಿಯನು. ಕೈಲಾಸವಾಸಿಯು. ಋಷಿಪತ್ನಿಯರ ಸಮೂಹವನ್ನು ಮೋಹಗೊಳಿಸಿದವನು. ಆತ್ಮಲೀಲೆಯಿಂದ ಆನಂದವನ್ನು ಪಡೆಯುವವನು. ನಮ್ಮ ಇಷ್ಟಾರ್ಥವನ್ನು ಪೂರೈಸುವವನು. ಅವನಿಗೆ ನನ್ನ ನಮಸ್ಕಾರಗಳು.

**ಮಂಗಲಪ್ರದಾಯ ಗೋತುರಂಗ ತೇ ನಮಃ ಶಿವಾಯ**
**ಗಂಗಯಾ ತರಂಗಿತೋತ್ತಮಾಂಗ ತೇ ನಮಃ ಶಿವಾಯ**
**ಸಂಗರಪ್ರವೃತ್ತವೈರಿಭಂಗ ತೇ ನಮಃ ಶಿವಾಯ**
**ಅಂಗಜಾರಯೇ ಕರೇಕುರಂಗ ತೇ ನಮಃ ಶಿವಾಯ ॥17॥**

ಶಿವನೆ! ನೀನು ಎತ್ತನ್ನೇರಿದವನು. ಮಂಗಳಪ್ರದನು. ನಿನ್ನ ತಲೆಯಲ್ಲಿ ಆ ಗಂಗೆ ಅಲೆಅಲೆಯಾಗಿ ಶೋಭಿಸುತ್ತಾಳೆ. ನೀನು ಯುದ್ಧದಲ್ಲಿ ಶತ್ರುಗಳನ್ನು ನಾಶಮಾಡುವವನು. ಕೈಯಲ್ಲಿ ಜಿಂಕೆಯನ್ನು ಧರಿಸಿದವನು. ಹೇ ಕಾಮವೈರಿ! ನಿನಗೆ ನಮಸ್ಕಾರ.

**ಈಹಿತಕ್ಷಣಪ್ರದಾನಹೇತವೇ ನಮಃ ಶಿವಾಯ**
**ಆಹಿತಾಗ್ನಿಪಾಲಕೋಕ್ಷಕೇತವೇ ನಮಃ ಶಿವಾಯ**
**ದೇಹಕಾಂತಿಧೂತರೌಪ್ಯಧಾತವೇ ನಮಃ ಶಿವಾಯ**
**ಗೇಹದುಃಖಪುಂಜಧೂಮಕೇತವೇ ನಮಃ ಶಿವಾಯ ॥18॥**

ಶಿವನು ಅಗ್ನಿಹೋತ್ರವನ್ನು ಮಾಡುವವರನ್ನು ಪಾಲಿಸುವವನು. ಇಷ್ಟಾರ್ಥಗಳನ್ನು ಕ್ಷಣದಲ್ಲಿ ನೀಡುವವನು. ಬೆಳ್ಳಿಯ ಕಾಂತಿಗಿಂತ ಮಿಗಿಲಾದ ದೇಹಕಾಂತಿಯುಳ್ಳವನು. ಸಂಸಾರದುಃಖವನ್ನು ಹೋಗಲಾಡಿಸುವವನು. ಅಂತಹ ನಂದಿವಾಹನನಿಗೆ ನಮಸ್ಕಾರ.

**ತ್ರ್ಯಕ್ಷ ದೀನಸತ್ಕೃಪಾಕಟಾಕ್ಷ ತೇ ನಮಃ ಶಿವಾಯ**
**ದಕ್ಷಸಪ್ತತಂತುನಾಶದಕ್ಷ ತೇ ನಮಃ ಶಿವಾಯ**
**ಋಕ್ಷರಾಜಭಾನುಪಾವಕಾಕ್ಷ ತೇ ನಮಃ ಶಿವಾಯ**
**ರಕ್ಷ ಮಾಂ ಪ್ರಪನ್ನಮಾತ್ರರಕ್ಷ ತೇ ನಮಃ ಶಿವಾಯ ॥19॥**

ಶಿವನೆ! ನೀನು ಸಜ್ಜನರ ರಕ್ಷಕನು. ದಕ್ಷಯಜ್ಞನಾಶಕನು. ಚಂದ್ರ ಸೂರ್ಯ ಅಗ್ನಿಗಳೇ ನಿನ್ನ ಮೂರು ಕಣ್ಣುಗಳು. ಹೇ ಮುಕ್ಕಣ್ಣ ನನ್ನನ್ನು ಕಾಪಾಡು.

**ನ್ಯಂಕುಪಾಣಯೇ ಶಿವಂಕರಾಯ ತೇ ನಮಃ ಶಿವಾಯ**
**ಸಂಕಟಾಬ್ಧಿತೀರ್ಣಕಿಂಕರಾಯ ತೇ ನಮಃ ಶಿವಾಯ**

**ಕಂಕಭೀಷಿತಾಭಯಂಕರಾಯ ತೇ ನಮಃ ಶಿವಾಯ**
**ಪಂಕಜಾನನಾಯ ಶಂಕರಾಯ ತೇ ನಮಃ ಶಿವಾಯ ॥20॥**

ಶಿವನು ಕೈಯಲ್ಲಿ ಜಿಂಕೆಯನ್ನು ಧರಿಸಿದವನು. ಮಂಗಳಕರನು. ಭಕ್ತರ ದುಃಖವನ್ನು ದೂರಮಾಡುವವನು. ಮೃತ್ಯುಭೀತಿಯನ್ನು ತೊಲಗಿಸುವವನು. ಸುಖವನ್ನು ದಯಾಪಾಲಿಸುವ ಆ ಶಿವನಿಗೆ ನಮಸ್ಕಾರ.

**ಕರ್ಮಪಾಶನಾಶ ನೀಲಕಂಠ ತೇ ನಮಃ ಶಿವಾಯ**
**ಶರ್ಮದಾಯ ವರ್ಯಭಸ್ಮಕಂಠ ತೇ ನಮಃ ಶಿವಾಯ ।**
**ನಿರ್ಮಮರ್ಷಿಸೇವಿತೋಪಕಂಠ ತೇ ನಮಃ ಶಿವಾಯ**
**ಕುರ್ಮಹೇ ನತೀರ್ನಮದ್ವಿಕುಂಠ ತೇ ನಮಃ ಶಿವಾಯ ॥21॥**

ಶಿವನೆ! ನೀನು ಕರ್ಮಬಂಧನವನ್ನು ಬಿಡಿಸುವವನು. ಕಂಠದಲ್ಲಿ ಭಸ್ಮವನ್ನು ಲೇಪಿಸಿಕೊಂಡವನು. ಮಹರ್ಷಿಗಳು ನಿನ್ನನ್ನು ಸೇವಿಸುತ್ತಾರೆ. ನೀನು ಶರಣರಿಗೆ ಸದ್ಗತಿಯನ್ನು ನೀಡುವವನು. ನಿನಗೆ ನಮಸ್ಕಾರ.

**ವಿಷ್ಟಪಾಧಿಪಾಯ ನಮ್ರವಿಷ್ಣವೇ ನಮಃ ಶಿವಾಯ**
**ಶಿಷ್ಟವಿಪ್ರಹೃದ್ಗುಹಾಚರಿಷ್ಣವೇ ನಮಃ ಶಿವಾಯ**
**ಇಷ್ಟವಸ್ತುನಿತ್ಯತುಷ್ಟಜಿಷ್ಣವೇ ನಮಃ ಶಿವಾಯ**
**ಕಷ್ಟನಾಶನಾಯ ಲೋಕಜಿಷ್ಣವೇ ನಮಃ ಶಿವಾಯ ॥22॥**

ನೀನು ಲೋಕಗಳ ಒಡೆಯ. ವಿಷ್ಣುವೂ ನಿನ್ನನ್ನು ನಮಿಸುತ್ತಾನೆ. ವೇದಜ್ಞರು ನಿನ್ನನ್ನು ಸದಾ ಧ್ಯಾನಿಸುತ್ತಾರೆ. ಇಂದ್ರನು ಬಯಸಿದ್ದನ್ನು

ನೀಡಿ ಅವನನ್ನು ಸದಾ ಸಂತೋಷದಲ್ಲಿ ಇಟ್ಟಿದ್ದೀಯೆ. ಕಷ್ಟನಾಶಕನಾದ ಶಿವನೆ! ನಿನಗೆ ನಮಸ್ಕಾರ.

**ಅಪ್ರಮೇಯದಿವ್ಯಸುಪ್ರಭಾವ ತೇ ನಮಃ ಶಿವಾಯ**
**ಸತ್ಪ್ರಪನ್ನರಕ್ಷಣಸ್ವಭಾವ ತೇ ನಮಃ ಶಿವಾಯ**
**ಸ್ವಪ್ರಕಾಶ ನಿಸ್ತುಲಾನುಭಾವ ತೇ ನಮಃ ಶಿವಾಯ**
**ವಿಪ್ರಡಿಂಭದರ್ಶಿತಾರ್ದ್ರಭಾವ ತೇ ನಮಃ ಶಿವಾಯ ॥23॥**

ಶಿವನೇ! ನೀನು ಅಪಾರಮಹಿಮನು. ಶರಣಾಗತರಕ್ಷಕನು. ಸ್ವಯಂಪ್ರಕಾಶನು, ಮಾರ್ಕಂಡೇಯನನ್ನು ಕಾಪಾಡಿದವನು. ನಿನಗೆ ನಮಸ್ಕಾರ.

**ಸೇವಕಾಯ ಮೇ ಮೃಡ ಪ್ರಸೀದ ತೇ ನಮಃ ಶಿವಾಯ**
**ಭಾವಲಭ್ಯ ತಾವಕಪ್ರಸಾದ ತೇ ನಮಃ ಶಿವಾಯ**
**ಪಾವಕಾಕ್ಷ ದೇವಪೂಜ್ಯಪಾದ ತೇ ನಮಃ ಶಿವಾಯ**
**ತಾವಕಾಂಘ್ರಿಭಕ್ತದತ್ತಮೋದ ತೇ ನಮಃ ಶಿವಾಯ ॥ 24॥**

ಶಂಕರ! ನನ್ನನ್ನು ಅನುಗ್ರಹಿಸು. ದೇವತೆಗಳೂ ನಿನ್ನ ಪಾದಸೇವಕರು. ನಿನ್ನ ಭಕ್ತರಿಗೆ ನೀನು ಆನಂದವನ್ನು ಕೊಡುವವನು. ನಿನಗೆ ನಮಸ್ಕಾರವಿರಲಿ.

**ಭುಕ್ತಿಮುಕ್ತಿದಿವ್ಯಭೋಗದಾಯಿನೇ ನಮಃ ಶಿವಾಯ**
**ಶಕ್ತಿಕಲ್ಪಿತಪ್ರಪಂಚಭಾಗಿನೇ ನಮಃ ಶಿವಾಯ**

**ಭಕ್ತಸಂಕಟಾಪಹಾರಯೋಗಿನೇ ನಮಃ ಶಿವಾಯ**
**ಯುಕ್ತಸನ್ಮನಃಸರೋಜಯೋಗಿನೇ ನಮಃ ಶಿವಾಯ ॥25॥**

ಶಿವನು ಭಕ್ತಿಮುಕ್ತಿಭೋಗಗಳನ್ನು ದಯಪಾಲಿಸುವವನು. ತನ್ನ ಶಕ್ತಿಯಿಂದ ಪ್ರಪಂಚವನ್ನು ಸೃಷ್ಟಿಸಿ ಅದರಲ್ಲಿ ತಾನೂ ಪ್ರವೇಶಿಸುತ್ತಾನೆ. ಭಕ್ತರ ತಾಪವನ್ನು ಪರಿಹರಿಸುವವನು. ಸಜ್ಜನರ ಹೃದಯದಲ್ಲಿ ವಾಸ ಮಾಡುವವನು. ಆ ಶಿವನಿಗೆ ನಮಸ್ಕಾರ.

**ಅಂತಕಾಂತಕಾಯ ಪಾಪಹಾರಿಣೇ ನಮಃ ಶಿವಾಯ**
**ಶಂತಮಾಯ ದಂತಿಚರ್ಮಧಾರಿಣೇ ನಮಃ ಶಿವಾಯ**
**ಸಂತತಾಶ್ರಿತವ್ಯಥಾವಿದಾರಿಣೇ ನಮಃ ಶಿವಾಯ**
**ಜಂತುಜಾತನಿತ್ಯಸೌಖ್ಯಕಾರಿಣೇ ನಮಃ ಶಿವಾಯ ॥26॥**

ಶಿವನು ಮೃತ್ಯುವಿಗೂ ಮೃತ್ಯುವು. ಭಕ್ತರ ಪಾಪತಾಪಗಳನ್ನು ನಾಶಮಾಡುವನು. ಸಮಸ್ತರಿಗೂ ಸುಖನೀಡುವವನು. ಆ ಗಜಚರ್ಮಾಂಬರನಿಗೆ ನಮಸ್ಕಾರ.

**ಶೂಲಿನೇ ನಮೋ ನಮಃ ಕಪಾಲಿನೇ ನಮಃ ಶಿವಾಯ**

**ಪಾಲಿನೇ ವಿರಿಂಚಿಮುಂಡಮಾಲಿನೇ ನಮಃ ಶಿವಾಯ**

**ಲೀಲಿನೇ ವಿಶೇಷರುಂಡಮಾಲಿನೇ ನಮಃ ಶಿವಾಯ**

**ಶೀಲಿನೇ ನಮಃ ಪ್ರಪುಣ್ಯಶಾಲಿನೇ ನಮಃ ಶಿವಾಯ ॥27॥**

ಶೂಲಧಾರಿಯೂ, ಬ್ರಹ್ಮಕಪಾಲಧಾರಿಯೂ, ರುಂಡಮಾಲಾಧಾರಿಯೂ, ಸಮಾಧಿಮಗ್ನನೂ ಆದ ಶಿವನಿಗೆ ನಮಸ್ಕಾರ.

**ಶಿವಪಂಚಾಕ್ಷರಮುದ್ರಾಚತುಷ್ಪದೋಲ್ಲಾಸಪದ್ಯಮಣಿಘಟಿತಾಮ್ ।**
**ನಕ್ಷತ್ರಮಾಲಿಕಾಮಿಹ ದಧದುಪಕಂಠಂ ನರೋ ಭವೇತ್ಸೋಮಃ ॥28॥**

ಇದು ಇಪ್ಪತ್ತೇಳು ಪದ್ಯಗಳೆಂಬ ನಕ್ಷತ್ರಗಳಿಂದ ರಚಿಸಲ್ಪಟ್ಟ ಸ್ತೋತ್ರಮಾಲೆ. ಇಲ್ಲಿರುವ ಪ್ರತಿಪದ್ಯದ ನಾಲ್ಕು ಪಾದಗಳಲ್ಲಿಯೂ ನಮಃಶಿವಾಯ ಎಂಬ ಪಂಚಾಕ್ಷರೀ ಮಂತ್ರವಿದೆ. ಈ ನಕ್ಷತ್ರಮಾಲಿಕೆಯನ್ನು ಕಂಠದಲ್ಲಿ ಧರಿಸಿದವನು(ಕಂಠಪಾಠ ಮಾಡಿ ನಿತ್ಯವೂ ಪಠಿಸುವವನು) ನಕ್ಷತ್ರಗಳಿಂದ ಸುತ್ತುವರಿಯಲ್ಪಟ್ಟ ಸೋಮ(ಚಂದ್ರ)ನಾಗುತ್ತಾನೆ ಮತ್ತು (ಸ+ಉಮ) ಉಮಾಸಹಿತನಾದ ಶಿವನ ಸಾರೂಪ್ಯವನ್ನು ಪಡೆಯುತ್ತಾನೆ.

*******

## ॥ ಲಕ್ಷ್ಮೀನೃಸಿಂಹಕರುಣಾರಸಸ್ತೋತ್ರಮ್ ॥

**ಶ್ರೀಮತ್ಪಯೋನಿಧಿನಿಕೇತನಚಕ್ರಪಾಣೇ**
**ಭೋಗೀಂದ್ರಭೋಗಮಣಿರಾಜಿತಪುಣ್ಯಮೂರ್ತೇ ।**
**ಯೋಗೀಶ ಶಾಶ್ವತ ಶರಣ್ಯ ಭವಾಬ್ಧಿಪೋತ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥1॥**

ರತ್ನಗಳ ಆಗರವಾದ ಸಮುದ್ರದಲ್ಲಿ ನೆಲೆಸಿರುವ ಶ್ರೀಚಕ್ರಧಾರಿಯೆ! ಆದಿಶೇಷನ ಫಣಾಮಣಿಗಳಿಂದ ಕಂಗೊಳಿಸುವ ಪುಣ್ಯಶರೀರಿಯೂ, ಯೋಗಿಗಳ ಒಡೆಯನೂ, ಶಾಶ್ವತನೂ, ಶರಣುಬಂದವರಿಗೆ ಆಶ್ರಯದಾತನೂ, ಸಂಸಾರ-ಸಾಗರವನ್ನು ದಾಟಿಸಲು ನಾವೆಯಂತಿರುವವನೂ ಆದ ಲಕ್ಷ್ಮೀನರಸಿಂಹನೆ! ನನ್ನ ಕರಗಳಿಗೆ ಆಶ್ರಯವನ್ನು ನೀಡು. (ನನ್ನನ್ನು ಕೈಹಿಡಿದೆತ್ತು.)

**ಬ್ರಹ್ಮೇಂದ್ರರುದ್ರಮರುದರ್ಕಕಿರೀಟಕೋಟಿ-**
**ಸಂಘಟ್ಟಿತಾಂಘ್ರಿಕಮಲಾಮಲಕಾಂತಿಕಾಂತ ।**
**ಲಕ್ಷ್ಮೀಲಸತ್ಕುಚಸರೋರುಹರಾಜಹಂಸ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥2॥**

ಬ್ರಹ್ಮ, ಇಂದ್ರ, ಶಿವ, ವಾಯು, ಸೂರ್ಯನೇ ಮೊದಲಾದ ದೇವತೆಗಳೆಲ್ಲ ಭಗವಂತನಾದ ನರಹರಿಗೆ ನಮಸ್ಕರಿಸಲು ಒಂದಾಗಿ ಬಂದಾಗ ಅವರೆಲ್ಲ ಧರಿಸಿದ ರತ್ನಖಚಿತವಾದ ಕಿರೀಟಗಳು ಒಂದಕ್ಕೊಂದು ಪರಸ್ಪರ ಘರ್ಷಿಸಿ ಅದರಿಂದ ಹೊರಟ ಹೊಳಪೆಲ್ಲ ಭಗವಂತನ ದೇಹವನ್ನು ವ್ಯಾಪಿಸಿ, ಅವನ ತೇಜಸ್ಸು ನೂರ್ಮಡಿ ಹೆಚ್ಚುವುದು. ಲಕ್ಷ್ಮಿಯ ವಿರಾಜಮಾನವಾದ

ಸ್ತನಗಳೆಂಬ ಸರೋವರದಲ್ಲಿ ಅತ್ತಿಂದಿತ್ತ ಓಡಾಡುತ್ತಿರುವ ರಾಜಹಂಸದಂತೆ ಭಾಸವಾಗುತ್ತಿರುವ ನರಸಿಂಹನು ನನ್ನ ಕೈಗಳಿಗೆ ಆಸರೆಯನ್ನು ನೀಡಲಿ.

**ಸಂಸಾರದಾವದಹನಾಕುಲಭೀಕರೋರು–**
**ಜ್ವಾಲಾವಲೀಭಿರತಿದಗ್ಧತನೂರುಹಸ್ಯ ।**
**ತ್ವತ್ಪಾದಪದ್ಮಸರಸೀಂ ಶರಣಾಗತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥3॥**

ಓ ಲಕ್ಷ್ಮೀನರಸಿಂಹನೆ! ಸಂಸಾರವೆಂಬ ಕಾಡ್ಗಿಚ್ಚಿನಲ್ಲಿ ನನ್ನ ದೇಹದ ರೋಮಗಳು ಅತಿಯಾಗಿ ಸುಡಲ್ಪಡುತ್ತಿವೆ. ಈ ಶರೀರದ ತಾಪದ ಉಪಶಮನಕ್ಕಾಗಿ ನಿನ್ನ ಪಾದಕಮಲಗಳಿಗೆ ಶರಣು ಬಂದಿದ್ದೇನೆ. ನನಗೆ ಆಶ್ರಯವನ್ನು ನೀಡು.

**ಸಂಸಾರಜಾಲಪತಿತಸ್ಯ ಜಗನ್ನಿವಾಸ**
**ಸರ್ವೇಂದ್ರಿಯಾರ್ಥಬಡಿಶಾಗ್ರಝಷೋಪಮಸ್ಯ ।**
**ಪ್ರೋತ್ಕಂಪಿತಪ್ರಚುರತಾಲುಕಮಸ್ತಕಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥4॥**

ಎಲೈ ಜಗನ್ನಿವಾಸ! ಸಂಸಾರವೆಂಬ ಬಲೆಯಲ್ಲಿ ಬಿದ್ದು, ಎಲ್ಲ ಇಂದ್ರಿಯಗಳು ವಿಷಯಗಳೆಂಬ ಗಾಳಕ್ಕೆ ಸಿಕ್ಕಿದ ಮೀನಿನಂತಾಗಿ ಹೆದರಿ ನಡುಗಿ ತತ್ತರಿಸುತ್ತಿರುವೆ. ನೀನಾದರೂ ನನ್ನ ಕೈಗಳಿಗೆ ಆಶ್ರಯವನ್ನು ನೀಡು.

**ಸಂಸಾರಕೂಪಮತಿಘೋರಮಗಾಧಮೂಲಂ**
**ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ ।**
**ದೀನಸ್ಯ ದೇವ ಕೃಪಯಾ ಪದಮಾಗತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥5॥**

ದೇವನಾದ ಲಕ್ಷ್ಮೀನರಸಿಂಹನೆ! ನಾನು ಭಯಂಕರವಾದ ಸಂಸಾರವೆಂಬ ಆಳವಾದ ಬಾಯಿಯಲ್ಲಿ ಬಿದ್ದಿರುವೆ. ನನ್ನನ್ನು ದುಃಖವೆಂಬ ನೂರಾರು ಸರ್ಪಗಳು ಸುತ್ತುವರೆದು ದಿಗ್ಭ್ರಮೆಗೊಳಿಸಿವೆ. ಆಪತ್ತಿಗೆ ಗುರಿಯಾಗಿ ನಿನ್ನ ಪಾದದ ಬಳಿಗೆ ಬಂದಿರುವ ದೀನನಾದ ನನಗೆ ನೀನು ಆಶ್ರಯವನ್ನು ನೀಡು.

**ಸಂಸಾರಭೀಕರಕರೀಂದ್ರಕರಾಭಿಘಾತ-**
**ನಿಷ್ಪೀಡ್ಯಮಾನವಪುಷಃ ಸಕಲಾರ್ತಿನಾಶ ।**
**ಪ್ರಾಣಪ್ರಯಾಣಭವಭೀತಿಸಮಾಕುಲಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥6॥**

ಸಮಸ್ತ ಸಂಕಟಗಳನ್ನೂ ನಾಶಮಾಡುವ ಸಂಸಾರವೆಂಬ ಭಯಂಕರವಾದ ಮದ್ದಾನೆಯ ಸೊಂಡಿಲ ಹಿಡಿತಕ್ಕೆ ಸಿಲುಕಿ ತಿರುಚಲ್ಪಟ್ಟ ಶರೀರವುಳ್ಳ ನಾನು ಪ್ರಾಣಭಯದಿಂದ ಕಂಗೆಟ್ಟಿರುವೆ. ಅಂತಹ ನನಗೆ ಹಸ್ತಾವಲಂಬನವನ್ನು ಕರುಣಿಸು.

**ಸಂಸಾರಸರ್ಪವಿಷದಿಗ್ಧಮಹೋಗ್ರತೀವ್ರ–**
**ದಂಷ್ಟ್ರಾಗ್ರಕೋಟಿಪರಿದಷ್ಟವಿನಷ್ಟಮೂರ್ತೇಃ ।**
**ನಾಗಾರಿವಾಹನ ಸುಧಾಬ್ಧಿನಿವಾಸ ಶೌರೇ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥7॥**

ಹೇ ಗರುಡವಾಹನ! ಅಮೃತಸಮುದ್ರನಿವಾಸಿಯೆ! ಶ್ರೀಕೃಷ್ಣನೆ! ಲಕ್ಷ್ಮೀನರಸಿಂಹಸ್ವಾಮಿಯೆ! ನಾನು ಸಂಸಾರವೆಂಬ ಕ್ರೂರಸರ್ಪಗಳ ವಿಷಯುಕ್ತ ಹಲ್ಲುಗಳಿಂದ ಕಡಿಯಲ್ಪಟ್ಟ ದೇಹವುಳ್ಳವನಾಗಿದ್ದೇನೆ. ಅಂತಹ ನನಗೆ ನಿನ್ನ ಕೈಗಳ ಆಸರೆಯನ್ನು ಕರುಣಿಸು.

**ಸಂಸಾರವೃಕ್ಷಮಘಬೀಜಮನಂತಕರ್ಮ–**
**ಶಾಖಾಯುತಂ ಕರಣಪತ್ರಮನಂಗಪುಷ್ಪಮ್ ।**
**ಆರುಹ್ಯ ದುಃಖಫಲಿನಂ ಪತತೋ ದಯಾಲೋ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥8॥**

ಕರುಣಾಮಯನಾದ ಲಕ್ಷ್ಮೀನರಸಿಂಹನೆ! ನಾನು ಪಾಪವೆಂಬ ಬೀಜದಿಂದ ಬಲಿತ ಸಂಸಾರವೆಂಬ ಮರವನ್ನು ಏರಿರುವೆ. ಆ ಮರಕ್ಕೆ ನಾನಾಕರ್ಮಗಳೇ ಟೊಂಗೆಗಳು; ಇಂದ್ರಿಯಗಳೇ ಎಲೆಗಳು; ಆಸೆಯೇ ಹೂವು; ದುಃಖವೇ ಫಲ; ಇಂತಹ ಮರದಿಂದ ಹೆದರಿ ಬೀಳುತ್ತಿರುವ ನನ್ನನ್ನು ಕೈಹಿಡಿದು ಕಾಪಾಡು.

**ಸಂಸಾರಸಾಗರವಿಶಾಲಕರಾಲಕಾಲ–**
**ನಕ್ರಗ್ರಹಗ್ರಸಿತನಿಗ್ರಹವಿಗ್ರಹಸ್ಯ ।**
**ವ್ಯಗ್ರಸ್ಯ ರಾಗನಿಚಯೋರ್ಮಿನಿಪೀಡಿತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥9॥**

ಹೇ ಲಕ್ಷ್ಮೀನರಸಿಂಹನೆ! ಸಂಸಾರವೆಂಬ ವಿಶಾಲವಾದ ಸಾಗರದಲ್ಲಿ ಬಿದ್ದಿರುವ ನನ್ನ ದೇಹವನ್ನು ಭಯಂಕರವಾದ 'ಕಾಲ'ವೆಂಬ ದೈತ್ಯ ಮೊಸಳೆಯು ಹಿಡಿದು ಹಿಂಸಿಸುತ್ತಿದೆ. ಹಾಗೂ ರಾಗ–ದ್ವೇಷಾದಿಗಳೆಂಬ ಭೀಕರವಾದ ಅಲೆಗಳು ನನ್ನನ್ನು ಬಡಿದು ಪೀಡಿಸುತ್ತಿವೆ. ಇದರಿಂದ ಗಾಬರಿಗೊಂಡ ನನಗೆ ನಿನ್ನ ಕೈಗಳ ಆಸರೆಯನ್ನು ಕರುಣಿಸು.

**ಸಂಸಾರಸಾಗರನಿಮಜ್ಜನಮುಹ್ಯಮಾನಂ**
**ದೀನಂ ವಿಲೋಕಯ ವಿಭೋ ಕರುಣಾನಿಧೇ ಮಾಮ್ ।**
**ಪ್ರಹ್ಲಾದಖೇದಪರಿಹಾರಕೃತಾವತಾರ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥10॥**

ಕರುಣಾಸಾಗರನಾದ ಹೇ ಪ್ರಭುವೆ! ಸಂಸಾರಸಾಗರದಲ್ಲಿ ಮುಳುಗಿ ಭಯದಿಂದ ತತ್ತರಿಸಿ ಭ್ರಾಂತನೂ ದುಃಖತಪ್ತನೂ ಆದ ನನ್ನನ್ನು ನೋಡು. ಭಕ್ತನಾದ ಪ್ರಹ್ಲಾದನ ಕಷ್ಟವನ್ನು ನೀಗಿಸುವುದಕ್ಕೋಸುಗ ಕಂಬವನ್ನು ಭೇದಿಸಿಕೊಂಡು ಮನುಷ್ಯ ದೇಹದೊಂದಿಗೆ ಸಿಂಹಮುಖವನ್ನು ಧರಿಸಿ ಬಂದ ನರಸಿಂಹಸ್ವಾಮಿಯೆ ನನ್ನ ಕೈಗಳಿಗೆ ಆಸರೆಯನ್ನು ಕರುಣಿಸು.

**ಸಂಸಾರಘೋರಗಹನೇ ಚರತೋ ಮುರಾರೇ**
**ಮಾರೋಗ್ರಭೀಕರಮೃಗಪ್ರಚುರಾರ್ದಿತಸ್ಯ ।**
**ಆರ್ತಸ್ಯ ಮತ್ಸರನಿದಾಘಸುದುಃಖಿತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥11॥**

ಹೇ ಮುರಾಂತಕನೆ! ಸಂಸಾರವೆಂಬ ಗೊಂಡಾರಣ್ಯದಲ್ಲಿ ಅಲೆದಾಡುತ್ತಿರುವೆನು. ಅಲ್ಲಿ ಮನ್ಮಥನೆಂಬ (ಕಾಮವೆಂಬ) ಕ್ರೂರ ಮೃಗವು ನನ್ನನ್ನು ವಿಧವಿಧವಾಗಿ ಪೀಡಿಸುತ್ತಿರುವುದು. ಮಾತ್ಸರ್ಯ-ವೆಂಬ ಬಿಸಿಲಿನ ಬೇಗೆ ನನ್ನನ್ನು ಸುಡುತ್ತಿರುವುದು. ಹೀಗೆ ದುಃಖತಪ್ತನಾಗಿ ನೋವನ್ನು ಅನುಭವಿಸುತ್ತಿರುವ ನನ್ನನ್ನು ನೀನು ಕೈಹಿಡಿದು ಕಾಪಾಡು.

**ಬದ್ಧ್ವಾ ಗಲೇ ಯಮಭಟಾ ಬಹು ತರ್ಜಯಂತಃ**
**ಕರ್ಷಂತಿ ಯತ್ರ ಭವಪಾಶಶತೈರ್ಯುತಂ ಮಾಮ್ ।**
**ಏಕಾಕಿನಂ ಪರವಶಂ ಚಕಿತಂ ದಯಾಲೋ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥12॥**

ದಯಾಮಯನಾದ ಲಕ್ಷ್ಮೀನರಸಿಂಹನೆ! ಸಂಸಾರವೆಂಬ ನೂರಾರು ಹಗ್ಗಗಳಿಂದ ನನ್ನ ಕುತ್ತಿಗೆಯನ್ನು ಕಟ್ಟಿ, ಯಮದೂತರು ಬಹು ಪೀಡಿಸುತ್ತ ಎಳೆದೊಯ್ಯುತ್ತಿರುವರು. ಏಕಾಂಗಿಯೂ, ಪರವಶನೂ ಭಯಭೀತನೂ ಆದ ನನ್ನನ್ನು ನೀನು ಕೈಹಿಡಿದು ರಕ್ಷಿಸು.

**ಲಕ್ಷ್ಮೀಪತೇ ಕಮಲನಾಭ ಸುರೇಶ ವಿಷ್ಣೋ**
**ಯಜ್ಞೇಶ ಯಜ್ಞ ಮಧುಸೂದನ ವಿಶ್ವರೂಪ ।**
**ಬ್ರಹ್ಮಣ್ಯ ಕೇಶವ ಜನಾರ್ದನ ವಾಸುದೇವ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥13॥**

ಕಮಲನಾಭ, ಕೇಶವ, ಮಧುಸೂದನ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಲಕ್ಷ್ಮೀನರಸಿಂಹಸ್ವಾಮಿಯೆ! ನನ್ನ ಕೈಗಳಿಗೆ ಆಶ್ರಯವನ್ನು ನೀಡು.

**ಏಕೇನ ಚಕ್ರಮಪರೇಣ ಕರೇಣ ಶಂಖಮ್**
**ಅನ್ಯೇನ ಸಿಂಧುತನಯಾಮವಲಂಬ್ಯ ತಿಷ್ಠನ್ ।**
**ವಾಮೇತರೇಣ ವರದಾಭಯಪದ್ಮಚಿಹ್ನಂ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥14॥**

ನೀನು ಒಂದು ಕೈಯಲ್ಲಿ ಚಕ್ರವನ್ನು, ಮತ್ತೊಂದು ಕೈಯಲ್ಲಿ ಶಂಖವನ್ನು ಧರಿಸಿ, ಇನ್ನೊಂದು ಕೈಯಿಂದ ಲಕ್ಷ್ಮಿಯನ್ನು ಆಲಂಗಿಸಿರುವೆ. ಪದ್ಮಚಿಹ್ನೆಯನ್ನು ಹೊಂದಿದ ಬಲಗೈ ವರಪ್ರದಾನಮಾಡುವ ಅಭಯಮುದ್ರೆಯಾಗಿ ತೋರುತ್ತಿದೆ. ಹೇ ದೇವ! ಲಕ್ಷ್ಮೀನರಸಿಂಹಸ್ವಾಮಿ! ನನ್ನ ಕೈಗಳಿಗೆ ಆಶ್ರಯವನ್ನು ಕರುಣಿಸು.

**ಅಂಧಸ್ಯ ಮೇ ಹೃತವಿವೇಕಮಹಾಧನಸ್ಯ**
**ಚೋರೈರ್ಮಹಾಬಲಿಭಿರಿಂದ್ರಿಯನಾಮಧೇಯೈಃ ।**
**ಮೋಹಾಂಧಕಾರಕುಹರೇ ವಿನಿಪಾತಿತಸ್ಯ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥15॥**

ಒಡೆಯನಾದ ಲಕ್ಷ್ಮೀನರಸಿಂಹನೇ! ಬಲಿಷ್ಠರಾದ ಇಂದ್ರಿಯಗಳೆಂಬ ಕಳ್ಳರುಗಳಿಂದ ವಿವೇಕವೆಂಬ ಸಂಪತ್ತೆಲ್ಲ ಅಪಹರಿಸಲ್ಪಟ್ಟು, ಮೋಹವೆಂಬ ಕತ್ತಲುಕವಿದ ಬಿಲದಲ್ಲಿ ಕುರುಡನಾಗಿ ಬಿದ್ದಿರುವೆ. ನೀನು ನನ್ನ ಕೈಗಳನ್ನು ಹಿಡಿದು ಕಾಪಾಡು.

**ಪ್ರಹ್ಲಾದನಾರದಪರಾಶರಪುಂಡರೀಕ–**
**ವ್ಯಾಸಾದಿಭಾಗವತಪುಂಗವಹೃನ್ನಿವಾಸ ।**
**ಭಕ್ತಾನುರಕ್ತಪರಿಪಾಲನಪಾರಿಜಾತ**
**ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥16॥**

ಪ್ರಹ್ಲಾದ, ನಾರದ, ಪರಾಶರ, ಪುಂಡರೀಕ, ವ್ಯಾಸರೇ ಮೊದಲಾದ ಭಾಗವತೋತ್ತಮರ ಹೃದಯದಲ್ಲಿ ನೆಲೆಸಿರುವ, ಭಜಿಸುವ ಭಕ್ತರನ್ನು ಪರಿಪಾಲಿಸುವ ದೇವತರು ಪಾರಿಜಾತ ವೃಕ್ಷದಂತಿರುವ, ಲಕ್ಷ್ಮೀನರಸಿಂಹಸ್ವಾಮಿಯೆ! ನನ್ನ ಕೈಗಳಿಗೆ ಆಸರೆಯನ್ನು ನೀಡು.

**ಲಕ್ಷ್ಮೀನೃಸಿಂಹಚರಣಾಬ್ಜಮಧುವ್ರತೇನ**
**ಸ್ತೋತ್ರಂ ಕೃತಂ ಶುಭಕರಂ ಭುವಿ ಶಂಕರೇಣ ।**
**ಯೇ ತತ್ಪಠಂತಿ ಮನುಜಾ ಹರಿಭಕ್ತಿಯುಕ್ತಾಃ**
**ತೇ ಯಾಂತಿ ತತ್ಪದಸರೋಜಮಖಂಡರೂಪಮ್ ॥17॥**

ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಪಾದಾರವಿಂದಗಳಲ್ಲಿ ದುಂಬಿಯಾ-ಗಿರುವ ಶಂಕರಭಗವತ್ಪಾದರಿಂದ ರಚಿಸಲ್ಪಟ್ಟ ಈ ಶುಭಕರವಾದ ಸ್ತೋತ್ರವನ್ನು ಭೂಲೋಕದಲ್ಲಿ ಹರಿಭಕ್ತಿಯುಳ್ಳ ಯಾವ ಮನುಜರು ಪಠಿಸುತ್ತಾರೋ ಅವರು ಆ ನರಹರಿಯ ಪಾದಕಮಲಗಳನ್ನು ಹೊಂದುವರು.

*************